# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 9** **ತಿಂಗಳು : ಅಕ್ಟೋಬರ್** **ವಿಷಯ : ದ್ವಿತೀಯ ಭಾಷೆ – ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಅಕ್ಟೋಬರ್** ಮೊದಲನೆಯ ವಾರ | **ಗದ್ಯ – ಜೇನು ಕುರುಬರ ತಾಯಿಯೂ, ಕಾಡು ಆನೆಯ ಮಗನೂ**<br>• ಆಲಿಸಿದ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವರು. | • ಶಿಕ್ಷಕರು, ವಿವಿಧ ಜನಸಮುದಾಯಗಳ ಬಗ್ಗೆ ವಿವರಿಸುತ್ತಾ, ಮುಖ್ಯವಾಗಿ ಕಾಡುಗಳಲ್ಲಿ ವಾಸ ಮಾಡುವ ಜನಾಂಗಗಳಲ್ಲಿ ಮುಖ್ಯವಾದ ಜೇನುಕುರುಬರ ಬಗ್ಗೆ ವಿವರಿಸುವರು. ವಿವರಣೆಯನ್ನು ಆಲಿಸಿ, ತಮ್ಮದೇ ಆದ ಮಾತುಗಳಲ್ಲಿ ಸಾರಾಂಶವನ್ನು ಬರೆಯುವರು. | ನಿಮಗೆ ತಿಳಿದಿರುವ ಬುಡಕಟ್ಟು ಸಮುದಾಯಗಳನ್ನು ಹೆಸರಿಸಿ |
| | | • ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ರಚಿಸುವರು. | • ಲೇಖಕರ ಸ್ಥಳ, ಕಾಲ ಮತ್ತು ಕೃತಿಗಳಿಗೆ ಸಂಬಂಧಿಸಿದ ಪದಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಸುವುದು. ಮೌಖಿಕವಾಗಿಯೂ ಮಕ್ಕಳು ಹೇಳಲು ಅವಕಾಶ ನೀಡುವುದು.<br>**ಅಭ್ಯಾಸ ಹಾಳೆ – 1** | ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ |
| | | • ಗದ್ಯಭಾಗವನ್ನು ಓದಿ ತಮ್ಮದೇ ಆದ ಮಾತುಗಳಲ್ಲಿ ವಿವರಿಸಲು ಸಮರ್ಥರಾಗುವರು . | • ಪಠ್ಯವನ್ನು ಮೌನವಾಗಿ ಓದಿ ಅರ್ಥೈಸಿಕೊಂಡು ಜೇನುಕುರುಬರ ಹೆಂಗಸು ಗೀತಾಳ ಜೀವನ ಮತ್ತು ಅವಳು ಆನೆ ಮರಿ ಶಿವನ ಬಗ್ಗೆ ಹೊಂದಿರುವ ವಾತ್ಸಲ್ಯ ಭಾವನೆಯನ್ನು ಅವರ ಸ್ವಂತ ಮಾತುಗಳಲ್ಲಿ ಅಭಿವ್ಯಕ್ತಿಸುವರು. | |
| | | • ವಾಕ್ಯರಚನಾ ಸಾಮರ್ಥ್ಯ ಬೆಳೆಸುವುದು . | • ಗದ್ಯದಲ್ಲಿ ಬರುವ ಸಾಹೇಬರು ಮತ್ತು ಗೀತಾಳ ಪಾತ್ರಗಳಿಗೆ ಸಂಬಂಧಿಸಿದಂತೆ ಸಂಭಾಷಣೆಗಳನ್ನು | **ಮೌಲ್ಯಮಾಪನ ಹಾಳೆ –1** |

| | | | | |
|---|---|---|---|---|
| | | | ರಚಿಸಲು ತಿಳಿಸುವುದು. | |
| | **ಅಕ್ಟೋಬರ್** ಎರಡನೆಯ ವಾರ | ಸೈದ್ಧಾಂತಿಕ ವ್ಯಾಕರಣ – ನಾಮಪದಗಳ ಪರಿಚಯ ಮಾಡಿಕೊಳ್ಳುವರು | ನಾಮಪದಗಳು, ನಾಮಪ್ರಕೃತಿ, ನಾಮಪದಗಳ ವಿಧಗಳು, ಸರ್ವನಾಮಗಳು ಇವುಗಳನ್ನು ಪರಿಚಯಿಸುವುದು<br>**ಅಭ್ಯಾಸ ಹಾಳೆ – 2** | ನಾಮಪದದ ಪ್ರಕಾರಗಳನ್ನು ಪಟ್ಟಿ ಮಾಡಿಸುವುದು. |
| | | • ದ್ವಿರುಕ್ತಿ ಮತ್ತು ಜೋಡುನುಡಿಗಳನ್ನು ತಿಳಿಯುವರು. | ಗದ್ಯದಲ್ಲಿ ಬಂದಿರುವ ಜೋಡುನುಡಿ ಮತ್ತು ದ್ವಿರುಕ್ತಿ ಪದಗಳನ್ನು ಪಟ್ಟಿಮಾಡಿಸುವುದು. | |
| | **ಅಕ್ಟೋಬರ್** ಮೂರನೆಯ ವಾರ | **ಪೂರಕ ಓದು – ಕುವೆಂಪುರವರ ವಿಶ್ವಮಾನವ ಸಂದೇಶ**<br>• ವಿಶ್ವಮಾನವ ಸಂದೇಶವನ್ನು ಅರ್ಥ ಮಾಡಿಕೊಳ್ಳುವರು. | • ಶಿಕ್ಷಕರು ಗದ್ಯಭಾಗವನ್ನು ಸ್ಪಷ್ಟವಾಗಿ ಓದಿ ಮಕ್ಕಳಿಗೆ ಅರ್ಥೈಸುವರು.<br>ಕುವೆಂಪುರವರ ವಿಶ್ವಮಾನವ ಸಂದೇಶ, ಪಂಚಮಂತ್ರಗಳು, ಸಪ್ತಸೂತ್ರಗಳನ್ನು ಪಟ್ಟಿ ಮಾಡಿಸುವುದು . | ಕುವೆಂಪುರವರ ವಿಶ್ವಮಾನವ ಗೀತೆಯ ಭಾವಾರ್ಥ ಬರೆಯಿರಿ. |
| | | • ಕಾಗುಣಿತ ದೋಷ ರಹಿತ ಬರೆವಣಿಗೆ ಸಾಮರ್ಥ್ಯ ಬೆಳೆಸಿಕೊಳ್ಳುವರು. | • ಪಾಠದ ಆಯ್ದ ಭಾಗವನ್ನು ಉಕ್ತಲೇಖನ ಚಟುವಟಿಕೆ ಮೂಲಕ ಬರೆಸುವುದು. | |
| | | • ಗೀತೆಯನ್ನು ರಾಗಬದ್ಧವಾಗಿ ಹಾಡುವರು . | • ವಿಶ್ವಮಾನವಗೀತೆಯನ್ನು ಮಕ್ಕಳು ರಾಗವಾಗಿ ಹಾಡುವಂತೆ ಪ್ರೇರೇಪಿಸುವುದು . | **ಮೌಲ್ಯಮಾಪನ ಹಾಳೆ –02** |

## ಅಭ್ಯಾಸ ಹಾಳೆ 1

### ಜೇನುಕುರುಬರ ತಾಯಿಯೂ, ಕಾಡು ಆನೆಯ ಮಗನೂ

**ಕೆಳಗೆ ನೀಡಿರುವ ಅಂಶಗಳನ್ನು ಆಧರಿಸಿ ಲೇಖಕರಾದ ಅಬ್ದುಲ್ ರಶೀದ್‌ರವರ ಪರಿಚಯವನ್ನು ವಾಕ್ಯರೂಪದಲ್ಲಿ ಮಾಡಿ**

| | |
|---|---|
| ಲೇಖಕರ ಹೆಸರು : ಅಬ್ದುಲ್ ರಶೀದ್ | ಕಾಲ: 1965 |
| ಸ್ಥಳ: ಕೊಡಗು ಜಿಲ್ಲೆಯ ಸುಂಟಿಕೊಪ್ಪ | ಕೃತಿಗಳು: ಹಾಲು ಕುಡಿದ ಹುಡುಗ, ಪ್ರಾಣ ಪಕ್ಷಿ, ಈ ತನಕದ ಕಥೆಗಳು, ನನ್ನ ಪಾಡಿಗೆ ನಾನು, ಮಾತಿಗೂ ಆಚೆ, ಅಲೆಮಾರಿಯ ದಿನಚರಿ, ಮೈಸೂರು ಪೋಸ್ಟ್, ಹೂವಿನ ಕೊಲ್ಲಿ, ಕಾಲು ಚಕ್ರ |
| ಪ್ರಶಸ್ತಿಗಳು : ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಲಂಕೇಶ್ ಪ್ರಶಸ್ತಿ | |
| | |

1. **ಅಬ್ದುಲ್ ರಶೀದ್‌ರವರು ಯಾವಾಗ ಜನಿಸಿದರು?**

   ________________________________________

   ________________________________________

2. **ಅಬ್ದುಲ್ ರಶೀದ್‌ರವರು ಬರೆದಿರುವ ಕೃತಿಗಳನ್ನು ಹೆಸರಿಸಿ?**

   ________________________________________

   ________________________________________

3. **ಲೇಖಕರಾದ ಅಬ್ದುಲ್ ರಶೀದ್‌ರವರಿಗೆ ದೊರೆತಿರುವ ಪ್ರಶಸ್ತಿಗಳನ್ನು ಪಟ್ಟಿಮಾಡಿ.**

## ಮೌಲ್ಯಮಾಪನ ಹಾಳೆ – 01

### ಜೇನುಕುರುಬರ ತಾಯಿಯೂ, ಕಾಡು ಆನೆಯ ಮಗನೂ

- **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. "ಜೇನುಕುರುಬರ ತಾಯಿಯೂ, ಕಾಡು ಆನೆಯ ಮಗನೂ" ಗದ್ಯದ ಆಕರ ಗ್ರಂಥ ಯಾವುದು?

___

___

2. ಜೇನುಕುರುಬರ ಗೀತಾ ಸಾಕುತ್ತಿದ್ದ ಗಂಡು ಆನೆಯ ತಾಯಿ ತೀರಿದ್ದು ಹೇಗೆ?

___

___

3. ಗೀತಾ, ಆನೆಗೆ ಬೈದಾಗ ಯಾವ ರೀತಿ ಮರುಗುತ್ತಿದ್ದಳು?

___

___

4. ಆನೆ ಕಣ್ಣಲ್ಲಿ ನೀರು ಬರುತ್ತಿರುವುದಕ್ಕೆ ಗೀತಾ ನೀಡಿದ ಪ್ರತಿಕ್ರಿಯೆ ಏನು?

___

___

5. ಆನೆ ಮರಿಗೆ ಶಿವ ಎಂದು ಹೆಸರಿಟ್ಟವರು ಯಾರು?

___

___

6. ಆನೆ ಶಿವನ ಬಗ್ಗೆ ಗೀತಾ ಯಾವ ಕನಸು ಇಟ್ಟುಕೊಂಡಿದ್ದಾಳೆ?

___

___

- **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1. ಜೇನುಕುರುಬರ ತಾಯಿ ಗೀತಾ ಸಾಕುತ್ತಿದ್ದ ಆನೆ ಮಗನ ಹೆಸರು ________

   ಅ) ಲಂಬೋದರ ಆ) ರಾಜೇಂದ್ರ ಇ) ಶಿವ ಈ) ರಶೀದ್

2. ಜೇನುಕುರುಬರ ಗೀತಾ ತನ್ನ ಮಕ್ಕಳನ್ನು ಪ್ರೀತಿಯಿಂದ ________ ಎಂದು ಬೈಯುತ್ತಿದ್ದಳು.

   ಅ) ಜಾಣ ಮಕ್ಕಳು ಆ) ಹಾಳಾದ ಮಕ್ಕಳು ಇ) ಮುದ್ದು ಮಕ್ಕಳು ಈ) ಕಳ್ಳ ಮಕ್ಕಳು

## ಮೌಲ್ಯಮಾಪನ ಹಾಳೆ – 01

### ಜೇನುಕುರುಬರ ತಾಯಿಯೂ, ಕಾಡು ಆನೆಯ ಮಗನೂ

➢ **ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.**

1. ಗುಂಡೇಟು = ________________ + ______________ ( ..................................)
2. ಮೀಯಲು = ________________ + ______________ ( ..................................)
3. ಮಣ್ಣೆರಚಿ = ________________ + ______________ ( ..................................)

➢ ಈ ಕೆಳಗಿನ ಪದಗಳಿಗೆ ತತ್ಸಮ ತದ್ಭವ ಪದಗಳನ್ನು ಬರೆಯಿರಿ.

1. ಶುಚಿ – ____________
2. ಸ್ನಾನ – ____________
3. ಮನುಷ್ಯ – ____________

➢ ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಆನೆ ಲಂಬೋದರ ತೀರಿದಾಗ ಗೀತಾ ಯಾವ ರೀತಿ ದುಃಖಿಸಿದಳು?

______________________________________________
______________________________________________
______________________________________________
______________________________________________
______________________________________________
______________________________________________
______________________________________________

2. ಗೀತಾ ಅಮ್ಮಾಳಮ್ಮನಲ್ಲಿ ಆನೆ ಶಿವನ ಬಗ್ಗೆ ಏನೆಂದು ಬೇಡಿಕೊಂಡಿದ್ದಳು?

______________________________________________
______________________________________________
______________________________________________
______________________________________________
______________________________________________
______________________________________________
______________________________________________

# ಅಭ್ಯಾಸ ಹಾಳೆ – 02

## ಜೇನುಕುರುಬರ ತಾಯಿಯೂ, ಕಾಡು ಆನೆಯ ಮಗನೂ

1. ನಾಮಪದ ಎಂದರೇನು?

_______________________________________________

_______________________________________________

_______________________________________________

2. ನಾಮಪದದ ವಿಧಗಳನ್ನು ಹೆಸರಿಸಿ

_______________________________________________

_______________________________________________

_______________________________________________

_______________________________________________

3. ಕೆಳಗೆ ನೀಡಿರುವ ಪದಗಳನ್ನು ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯಿರಿ.

| ಗಣೇಶ, ಮಕ್ಕಳು, ಕುರುಡ, ಧಾರವಾಡ, ವಿಜ್ಞಾನಿ, ನದಿ, ಪಂಡಿತ, ಗಂಗಾ, ಹೆಂಗಸು, ಜಾಣ, ರಾಮ, ಬೆಟ್ಟ | | |
|---|---|---|
| ರೂಢನಾಮ | ಅಂಕಿತನಾಮ | ಅನ್ವರ್ಥ ನಾಮ |
| | | |

4. ಈ ಕೆಳಗಿನ ವಾಕ್ಯಗಳಲ್ಲಿ ಬಳಕೆಯಾಗಿರುವ ಸರ್ವನಾಮಗಳನ್ನು ಗುರುತಿಸಿ ಬರೆಯಿರಿ.

**ಮಾದರಿ:** ಅವನು ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ. **ಸರ್ವನಾಮ** : ಅವನು

| | |
|---|---|
| ಅವಳು ಇಂಪಾಗಿ ಹಾಡಿದಳು. | |
| ನಾನು ಪ್ರಾಮಾಣಿಕತೆಯಿಂದ ಬದುಕಲು ಬಯಸುತ್ತೇನೆ. | |
| ವೇಗವಾಗಿ ಓಡುವುದರಲ್ಲಿ ಅವರು ನಿಪುಣರಾಗಿದ್ದಾರೆ. | |
| ಅತಿಯಾದ ಹೊಗಳಿಕೆಗೆ ನಾವು ಹಿಗ್ಗಬಾರದು. | |

5. ಇವುಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ

| ಎ | | ಬಿ |
|---|---|---|
| ಅ) ನೀನು | – | ಆತ್ಮಾರ್ಥಕ ಸರ್ವನಾಮ |
| ಆ) ನಾನು | – | ಮಧ್ಯಮ ಪುರುಷ ಸರ್ವನಾಮ |
| ಇ) ಅವನು | – | ಪ್ರಶ್ನಾರ್ಥಕ ಸರ್ವನಾಮ |
| ಈ) ತಾನು | – | ಉತ್ತಮ ಪುರುಷ ಸರ್ವನಾಮ |
| ಉ) ಹೇಗೆ | – | ಪ್ರಥಮ ಪುರುಷ ಸರ್ವನಾಮ |

## ಮೌಲ್ಯಮಾಪನ ಹಾಳೆ – 02

## ಕುವೆಂಪು ಅವರ ವಿಶ್ವಮಾನವ ಸಂದೇಶ

- **ಈ ಪ್ರಶ್ನೆಗಳಿಗೆ ಉತ್ತರಿಸಿರಿ**

1. ಸ್ವಾಮಿ ವಿವೇಕಾನಂದರ ಪ್ರಕಾರ ಈ ಜಗತ್ತಿನಲ್ಲಿ ಎಷ್ಟು ಧರ್ಮಗಳಿವೆ?

2. ಕುವೆಂಪು ಅವರ ಪ್ರಕಾರ ವಿದ್ಯೆಯ ಕರ್ತವ್ಯವೇನು?

3. ಕುವೆಂಪು ಅವರ ಪಂಚಮಂತ್ರಗಳು ಯಾವುವು?

4. ಧರ್ಮಗಳು ಉಂಟುಮಾಡಿರುವ ತೊಂದರೆಗಳೇನು?

5. ವಿನೋಬಾ ಭಾವೆಯವರು ಮತಧರ್ಮದ ಬಗ್ಗೆ ಏನು ಹೇಳಿದ್ದಾರೆ?

6. ವಿಶ್ವಮಾನವರಾಗಲು ನಾವು ಅನುಸರಿಸಬೇಕಾದ ಸಪ್ತಸೂತ್ರಗಳನ್ನು ಪಟ್ಟಿಮಾಡಿರಿ.